ಮಲ್ಲಿಕಾರ್ಜುನ, ಸುರಧೇನುಪುರ

ಮದುವೆಗೆ ಮುನ್ನ ನಿಶ್ಚಿತಾರ್ಥದ ಔಚಿತ್ಯವೇನು?



ಕೈಗೆ ಬಂದದ್ದು Boyಗೆ ಬರದಂತಾದೀತೆಂಬ ಭಯ.

ಸಿ.ಕೆ. ಗಣಪ್ಪನವರ, ಮುಂಡರಗಿ

ಪಕ್ಷ ಮೊದಲೋ, ರಾಜಕಾರಣ ಮೊದಲೋ?

ಪಕ್ಷವೇ; ಮಾನ, ಮರ್ಯಾದೆಗಳಿಗೆ 'ಪಿತೃಪಕ್ಷ'ವಾದ ನಂತರವೇ ರಾಜಕಾರಣ.

ಬಿ.ಆರ್. ಉಷಾ, ಬೆಂಗಳೂರು

ಗಂಡಿಗೆ ದುಃಖ ಆದರೆ ಬೀರು; ಹೆಣ್ಣಿಗೆ ದುಃಖ ಆದರೆ?

ಆಗಲೂ 'ಅವಳವಸ್ಥೆ ನೋಡ್ಲಾರೆ ಗುರೂ' ಎನ್ನುತ್ತಾ ಗಂಡೇರಿಸುವ ಮತ್ತೊಂದು ಬೀರು.

ರಾಜೀವ್ ಎನ್. ಮಾಗಲ್, ಸಕಲೇಶಪುರ

ದಿನವೂ ಗುಡ್‌ಮಾರ್ನಿಂಗ್ ಗುಡ್‌ನೈಟ್ ಕಳುಹಿಸುವ ವ್ಯಕ್ತಿ ಎದುರು ಸಿಕ್ಕಾಗ 'ಎಲ್ಲೋ ನೋಡಿದ್ದೀನಲ್ಲ...' ಎನ್ನುವರಲ್ಲ?



'ತಳ್ಳುಸಂದೇಶಿ'ಗಳೇ ಹಾಗೆ. ಫಾರ್ವರ್ಡಿಸುವ ಜನಕ್ಕೆ ನೆನಪು ಬ್ಯಾಕ್ವರ್ಡು, ಆಕ್ವರ್ಡು.

ಬಿ. ಬಸವರಾಜ್, ಹರಿಹರ

ನಿವೃತ್ತಿಯಾಗಿ ಎರಡೂವರೆ ವರ್ಷವಾದರೂ ಇನ್ನೂ ಆಫೀಸಿನ ಬಗ್ಗೆ ಕನಸು ಬೀಳುವುದೇಕೆ?

ಆಫೀಸಿನ ಕನಸಿನ ಕನ್ಯೆಯ ಪ್ರಭಾವ ಇದ್ದೀತು.

ಪಿ.ಜೆ. ರಾಘವೇಂದ್ರ, ಮೈಸೂರು

ತಮ್ಮ ಕಚೇರಿಗೆ ಹೋಗುವಾಗ ಸೂಟುಬೂಟು ಧರಿಸುವವರು ಬೇರೆ ಕಚೇರಿಗೆ ಬರುವಾಗ ದೊಗಲೆ ಚಡ್ಡಿ ಧರಿಸುವುದೇಕೆ?

'ಫುಲ್ ಪ್ಯಾಂಟಿಗೂ ಕಾಸಿಲ್ಲ, ಕಡಿಮೆ ಲಂಚ ಕೇಳಿ' ಎಂದು ಸೂಚಿಸಲು.

ವೈ.ವಿ. ಪ್ರಭಾಕರ, ಬೆಂಗಳೂರು

ನನ್ನನ್ನು ವರಿಸಿದರೆ ನಿನ್ನನ್ನು ಗ್ಯಾರಂಟಿ ಚೆನ್ನಾಗಿ ನೋಡಿಕೊಳ್ಳುವೆನೆಂದರೆ 5 ಗ್ಯಾರಂಟಿ ಕೊಡಿರೆಂದಳು?

ಡೆಬಿಟ್, ಕ್ರೆಡಿಟ್, ಡೈನರ್, ಟ್ರಾವಲರ್, ಮೆಟ್ರೋ ಕಾರ್ಡ್ಸ್ ಕೊಡುವೆನೆಂಬ ಗ್ಯಾರಂಟಿ ಕೊಡಬೇಕಂತೆ.

ಅನಂತಪದ್ಮನಾಭ ಎಚ್.ಎಂ. ಮೈಸೂರು

ಭಗವಂತನು ಮೆಲ್ಲಗೆ ಮಾತನಾಡುವನೋ ಅಥವಾ ಜೋರೋ?

ಅವನೂ ನಮ್ಮ ಕಾರ್ಪೊರೇಟ್ ಉದ್ಯೋಗಿಗಳಂತೆ – ಮಾತನಾಡಲು ಪುರುಸೊತ್ತಿಲ್ಲ.

ಅ. ಮೃತ್ಯುಂಜಯ, ಪಾಂಡವಪುರ

ಸಾವು ಸನಿಹ ಇದ್ದರೂ ಆಸೆ ಬಿಡುವುದಿಲ್ಲ. ಏಕೆ?

ಸ್ಲಾಗ್ ಓವರಲ್ಲಿ ಸಿಕ್ಕಷ್ಟು ಚಚ್ಚಬೇಕೆಂಬ ಕ್ರಿಕೆಟ್ ನಿಯಮ.

ಅನಸೂಯಾ ಟಿ, ಕೇದಿಗೆಮನೆ

ರಾಮ್, ನನಗೆ ದೇವರಾಗಬೇಕೆಂಬ ಆಸೆ. ಸುಲಭದ ದಾರಿ?

ಆಶ್ರಮಕ್ಕಷ್ಟು ಬಂಡವಾಳ, ಕೆಲವು ಶ್ಲೋಕಗಳು, ಚೇಲಾ ಪಡೆ ಇದ್ದರೆ ದೇವರು ತಯಾರ್!

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಹಣ ಆಗಲಿ, ಹೆಣ ಆಗಲಿ, ಹೆಚ್ಚು ಹೊತ್ತು ಕಾಯಿಸಬಾರದಂತೆ. ಹೌದಾ?

ಹಾಗೇನಿಲ್ಲ. ಹೆಣವನ್ನು ಐಸಿಯೂಲಿ ಕಾಯಿಸಿದಷ್ಟೂ ಲಾಭವೆಂಬ ಆಸ್ಪತ್ರೆಗಳಿವೆ.

ಜಗದೀಶ ಬಿ. ಹೊಸೂರು, ಮೈಸೂರು

ನಟ–ನಟಿಯರು ನಾನು, ನನ್ನದು ಎನ್ನುವಾಗ ತೋರುಬೆರಳನ್ನು ತಮ್ಮ ಗುಂಡಿಗೆಯ ಕಡೆ ತೋರುವುದೇಕೆ?

ಸ್ವಂತದ ಬಗ್ಗೆಯ ಮಾತುಗಳು ಎದೆಯಾಳದಿಂದ ಮೂಡುವವೆಂದು ಸೂಚಿಸಲು.

ಅಮರಯ್ಯಾ ಪತ್ರಿಮಠ, ಸುರಪುರ

ಬಾಹುಬಲಕ್ಕೂ, ಬುದ್ಧಿಬಲಕ್ಕೂ ವ್ಯತ್ಯಾಸವೇನು?

ಬುದ್ಧಿಬಲ ಧಣಿ; ಬಾಹುಬಲ ಸೇವಕ.

## ಬಹುಮಾನಿತ ಪ್ರಶ್ನೆ

ವಿ. ಹೇಮಂತಕುಮಾರ್, ಬೆಂಗಳೂರು

ಅಹಿಂಸಾವಾದಿ ಗಾಂಧೀಜಿಯ ಕೈಯಲ್ಲಿ ಉದ್ದವಾದ ಕೋಲಿರುತ್ತಿತ್ತೇಕೆ?

ಸ್ವಾತಂತ್ರ್ಯವೆಂಬ ಬಟ್ಟೆಯನ್ನು ಭಾರತದ ತಂತಿಯ ಮೇಲೆ ಹದವಾಗಿ ಹರವಲು.

ಛಾಯಾದ್ರಿ ಪಿ ವೈದ್ಯ, ಬೆಂಗಳೂರು

ನೀವೇ ಒಂದು ಪ್ರಶ್ನೆ ಕೇಳಿ ನನಗೆ ಉತ್ತರಿಸಲು ಅವಕಾಶ ನೀಡುವಿರಾ?

ಓಕೆ. ನೀವು ಪಿ ವೈದ್ಯ. ನಿಮ್ಮ ಮನೆಯಲ್ಲಿ ಎ ಇಂದ ಓ ವರೆಗೆ ವೈದ್ಯರಿದ್ದಾರೇನು?


ಎಂ.ಎ. ಕುಮಾರ್, ಬೆಂಗಳೂರು

ಎಷ್ಟು ಸಂ ಸೇರಿದರೆ ಸಂಬಂಧ ಗಟ್ಟಿಗೊಳ್ಳುತ್ತದೆ?

ಮೂರು. ಸಂಕಲ್ಪ; ಸಂಕಾಶ; ಸಂಕ್ರಮಣ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಹೆಂಡತಿಯನ್ನು ತವರಿಗೆ ಬಹಳ ದಿವಸ ಕಳುಹಿಸಬಾರದಂತೆ. ಏಕೆ?



ಗಂಡನ ಚಟಗಳು ಮಿತಿ ಮೀರಿಯಾವೆಂಬ ಭಯ.

ಹೆಚ್.ವಿ. ವೆಂಕಟೇಶ್, ತೋಟೂರುಶೆಟ್ಟಿಹಳ್ಳಿ

ಮುಂದಿನ ಚುನಾವಣೆ ನಂತರ ಮೃಷ್ಟಾನ್ನ ಸಿಗದಿದ್ದರೂ ಹಸಿವು ನಿವಾರಣೆಯಾದೀತೆ?

'ಆದೀತು ಮಗನೆ' ಎಂದು ಮಂತ್ರಿಯೊಬ್ಬನು ಮಗನಿಗೆ ಹೇಳಿದನಂತೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ರೂಪದರ್ಶಿಗಳ ಉಡುಪು ನೆನ್ನೆ ಗೋಣಿಚೀಲದ್ದು; ಇಂದು ಕಸದ್ದು. ನಾಳೆ?

ಕೋಸನ್ನೇ ಬಟ್ಟೆಯಾಗಿ ಧರಿಸಿ 'ಕೋಸಂಬರಿ' ಎನ್ನಿಸಿಕೊಳ್ಳಲು ತಯಾರಿದ್ದಾರಂತೆ.

ಎಸ್ಸೆನ್ ಮಹಾಬಲರಾವ್, ಎನ್ನರ್ಪುರ

ಹುಡುಗ ಹುಡುಗಿ ತಪ್ಪು ಮಾಡದೆ ಮುಂದುವರಿಯುವುದು ಹೇಗೆ?

ವೃದ್ಧ ವೃದ್ಧೆಯರ ಗತಕಾಲದ ತಪ್ಪುಗಳಿಂದ ಅರಿತು.

■ ರಾಮ್